**ಸಿ.ಸಿ. ನಂಬರಃ 2072/2025**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 21-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ವಿ.ಎನ್. ವಕೀಲರಿಂದ,**

ನಾನು ಫಿರ್ಯಾದಿ ಸಂಘದಲ್ಲಿ ಸಾಲ ವಸೂಲಾತಿ ಅಧಿಕಾರಿಯಾಗಿ ಸುಮಾರು 9 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಪ್ರಕರಣದ ದೂರನ್ನು ದಾಖಲಿಸಲು ನಿರ್ದೇಶಕರ ಮಂಡಳಿಯವರು ಅಧಿಕಾರ ನೀಡಿರುತ್ತಾರೆ. ಆ ಬಗ್ಗೆ ನಿರ್ದೇಶಕರ ಮಂಡಳಿಯಲ್ಲಿ ಠರಾವು ಆಗಿರುತ್ತದೆ. ಫಿರ್ಯಾದಿ ಸಂಘದ ನಿರ್ದೇಶಕರ ಮಂಡಳಿಯಲ್ಲಿ ಒಟ್ಟೂ 13 ಜನ ನಿರ್ದೇಶಕರು ಇರುತ್ತಾರೆ. ನನಗೆ ಅಧಿಕಾರ ನೀಡಿದ ಠರಾವಿನಲ್ಲಿ ಎಲ್ಲಾ ನಿರ್ದೇಶಕರು ಸಹಿ ಮಾಡಿರುತ್ತಾರೆ. ಆ ರೀತಿ ಎಲ್ಲಾ ನಿರ್ದೇಶಕರು ಸಹಿ ಮಾಡಿದ ಠರಾವಿನ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ, ಬೇಕಾದರೆ ಹಾಜರುಪಡಿಸಬಹುದು. ನಾನು ಹೇಳುವಂತೆ ಅಧಿಕಾರ ನೀಡಿ, ಯಾವುದೇ ಠರಾವು ಆಗದೇ ಇರುವುದರಿಂದ ಇಲ್ಲಿಯವರೆಗೆ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದೂರಿನಲ್ಲಿ ಹೇಳಿದ ಸಾಲ ಕಟ್ ಬಾಕಿಯ ಬಗ್ಗೆ ಮೂಲ ಸಾಲಗಾರರಿಗೆ ನೋಟೀಸು ನೀಡಿರುತ್ತೇವೆ. ಸದ್ರಿ ನೋಟೀಸನ ದಿನಾಂಕ ಈಗ ನೆನಪಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಯು ಮೂಲ ಸಾಲಗಾರರ ಗಂಡ. ದೇವೇಂದ್ರ ನಾಯ್ಕ ಮೂಲ ಸಾಲಗಾರರ ತಂದೆ. ಆರೋಪಿ ಫಿರ್ಯಾದಿ ಸಂಘದಲ್ಲಿ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ. ದೂರಿನಲ್ಲಿ ಹೇಳಿದ ಸಾಲ ನೀಡಿದ ಸಂದರ್ಭದಲ್ಲಿ ಸಾಲದ ಅರ್ಜಿ, ಸಾಲದ ಕರಾರು, ಡಿ.ಪಿ. ನೋಟ್, ಜಾಮೀನುದಾರರಿಂದ ಮತ್ತು ಸಾಲಗಾರರಿಂದ ಭದ್ರತಾ ಪತ್ರಗಳನ್ನು ಪಡೆದುಕೊಂಡಿರುತ್ತೇವೆ. ಮೂಲ ಸಾಲಗಾರರು ಟೈಲರಿಂಗ್ ಕೆಲಸಕ್ಕೆ ಸಂಬಂಧಿಸಿದಂತೆ ಸಾಲ ಪಡೆದುಕೊಂಡಿದ್ದರು. ಮೂಲ ಸಾಲಗಾರರಿಂದ ಅವರ ಆದಾಯದ ದಾಖಲಾತಿಗಳನ್ನು ಸಾಲ ನೀಡುವಾಗ ಪಡೆದುಕೊಂಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**